# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 635
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ.ನಮೋಶಿ ( ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 21-02-2023
ಉತ್ತರಿಸುವ ಸಚಿವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; | ಬಾಲ್ಯ ವಿವಾಹ ತಡೆಗೆ ಸರ್ಕಾರದಿಂದ ಕೈಗೊಳ್ಳಲಾದ ಕ್ರಮಗಳು ಈ ಕೆಳಗಿನಂತಿವೆ.<br>• ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ಹಾಗೂ ಬಾಲ್ಯ ವಿವಾಹ ನಿಷೇಧ (ಕರ್ನಾಟಕ) ನಿಯಮಗಳು 2014ನ್ನು ರಾಜ್ಯಾದಂತ ಜಾರಿಗೊಳಿಸಲಾಗುತ್ತಿದೆ.<br>• ಬಾಲ್ಯವಿವಾಹ ನಿಷೇಧ ಕಾಯ್ದೆ-2006ನ್ನು ಬಲಪಡಿಸಲು ಕರ್ನಾಟಕ ರಾಜ್ಯವು ಕಾಯ್ದೆಗೆ ತಿದ್ದುಪಡಿಯನ್ನು ತಂದಿದ್ದು, ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಅಧಿನಿಯಮ 2016ನ್ನು ದಿನಾಂಕ: 03-03-2018ರಿಂದ ಜಾರಿಗೆ ತಂದಿರುತ್ತದೆ.<br>• ಬಾಲ್ಯವಿವಾಹ ನಿಷೇಧ ಕಾಯ್ದೆಯ ಅನುಷ್ಠಾನಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಒಳಗೊಂಡಂತೆ ಪ್ರಮುಖ 10 ಇಲಾಖೆಗಳಲ್ಲಿ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸುತ್ತಿರುವ (ರಾಜ್ಯ/ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯತ್ ವ್ಯಾಪ್ತಿಯ) 58,000 ಅಧಿಕಾರಿಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿ ಅವರ ಅಧಿಕಾರದ ವ್ಯಾಪ್ತಿಯನ್ನು ನಿಗಧಿಪಡಿಸಿ ವಿವಿಧ ಹಂತಗಳಲ್ಲಿ ನೇಮಿಸಿ 2018ರಲ್ಲಿ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಅವರ ಪ್ರಕಾರ್ಯ ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಲಾಗಿದೆ. 10 ವಿವಿಧ ಇಲಾಖೆಗಳ ನಿರ್ದಿಷ್ಟ ಪಾತ್ರಗಳ ಬಗ್ಗೆ ಸ್ಪಷ್ಟಪಡಿಸಲಾಗಿದೆ.<br>• 2022-23ನೇ ಸಾಲಿನಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ಬಾಗೀದಾರರ ಇಲಾಖೆಗಳ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ಅವರ ಕರ್ತವ್ಯ ನಿರ್ವಹಿಸಲು ಅನುಕೂಲವಾಗುವಂತೆ ಸಿದ್ಧಪಡಿಸಲಾಗಿರುವ ಕ್ರಮಬದ್ಧ ಕಾರ್ಯವಿಧಾನ (SOP) ಕುರಿತಂತೆ ತರಬೇತಿಗಾಗಿ ಪ್ರತಿ ಜಿಲ್ಲೆಗೆ ರೂ. 50,000/-ಗಳಂತೆ ಒಟ್ಟು ರೂ. 15.50 ಲಕ್ಷಗಳ ಅನುದಾನವನ್ನು 31 ಜಿಲ್ಲೆಗಳಿಗೆ ಬಿಡುಗಡೆ ಮಾಡಿ ತರಬೇತಿ ಹಮ್ಮಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ.<br>• 2022-23ನೇ ಸಾಲಿನಲ್ಲಿ ಆದೇಶ ಸಂಖ್ಯೆ ಮಮಅಇ: ಬಾವಿನಿಕೋ ಆಯವ್ಯಯ 01:2022-23, ದಿನಾಂಕ: 05-01-2023ರಲ್ಲಿ ಬಾಲ್ಯವಿವಾಹ ನಿಷೇಧ ಕುರಿತು ಯುವಜನಾಂಗದಲ್ಲಿ ಅರಿವು ಮೂಡಿಸಲು ವಿವಿಧ ಇಲಾಖೆಗಳ ಸಹಕಾರದೊಂದಿಗೆ ಯುವ ವೇಳ ಹಾಗೂ ಇತರೆ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ರಾಜ್ಯದ 4 ವಿಭಾಗಳಲ್ಲಿನ ಬೆಳಗಾವಿ, ಚಾಮರಾಜನಗರ, ಯಾದಗಿರಿ ಮತ್ತು ತುಮಕೂರು ಜಿಲ್ಲೆಗಳಿಗೆ ರೂ. 5.00 ಲಕ್ಷಗಳಂತೆ ಒಟ್ಟು ರೂ. 20.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. |

| | | |
|---|---|---|
| | | • ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸುರಕ್ಷಿಣಿ:- ಬಾಲ್ಯವಿವಾಹದಿಂದ ಮಕ್ಕಳ ರಕ್ಷಣೆ ಹಾಗೂ ಅನುಸರಣಾ ಮಾಹಿತಿ ಬಾಲ್ಯವಿವಾಹ ನಿಷೇಧ ಕಾಯ್ದೆಯ ಸಮರ್ಪಕ ಅನುಷ್ಠಾನಕ್ಕಾಗಿ ಹಾಗೂ ಮೇಲ್ವಿಚಾರಣೆಗಾಗಿ ಸುರಕ್ಷಿಣಿ ಎಂಬ ವೆಬ್ ಪೋರ್ಟಲ್‌ನ್ನು NIC ಸಹಯೋಗದಿಂದ ಅಭಿವೃದ್ಧಿ ಪಡಿಸಲಾಗಿದ್ದು, ಸದರಿ ವೆಬ್ ಪೋರ್ಟಲ್ ಕುರಿತು ಪ್ರಕರಣಗಳ ದತ್ತಾಂಶ ಸಂಗ್ರಹಣೆಗೆ ಹಾಗೂ ಮೇಲ್ವಿಚಾರಣೆಗೆ ಅನುಕೂಲವಾಗುತ್ತಿದ್ದು, ಸದ್ಯದಲ್ಲಿಯೇ ಚಾಲನೆಗೆ ಕ್ರಮವಹಿಸಲಾಗುತ್ತಿದೆ.<br><br>• ಬಾಲ್ಯವಿವಾಹವನ್ನು ತಡೆಗಟ್ಟುವ ಉದ್ದೇಶದಿಂದ ಕೊಪ್ಪಳ ಜಿಲ್ಲೆಯಲ್ಲಿ ಯಶ್ವಸಿಯಾಗಿ ಅನುಷ್ಠಾನಗೊಳಿಸಿರುವ ಸ್ಫೂರ್ತಿ ಯೋಜನೆಯನ್ನು ರಾಜ್ಯದ ಇತರೆ 5 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಕಲಬುರ್ಗಿ, ರಾಯಚೂರು ಮತ್ತು ವಿಜಯಪುರ ಜಿಲ್ಲೆಗಳ 11 ತಾಲ್ಲೂಕು (ಹುನಗುಂದ, ಸವದತ್ತಿ, ಗೋಕಾಕ್, ಹುಕ್ಕೇರಿ, ಚಿಂಚೋಳಿ, ಜೇವರ್ಗಿ, ಲಿಂಗಸುಗೂರು, ದೇವದುರ್ಗ, ಮುದ್ದೇಬಿಹಾಳ, ಇಂಡಿ)ಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ ಮಮಇ 95 ಮಮಅ 2022, ದಿನಾಂಕ: 24-01-2023ರನ್ವಯ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. |
| ಆ) | ಕಳೆದ ನಾಲ್ಕು ವರ್ಷಗಳಲ್ಲಿ ದಾಖಲಾದ ಬಾಲ್ಯವಿವಾಹ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ ನಾಲ್ಕು ವರ್ಷಗಳಲ್ಲಿ ದಾಖಲಾದ ಬಾಲ್ಯವಿವಾಹ ಪ್ರಕರಣಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-01**ರಲ್ಲಿ ಒದಗಿಸಿದೆ. |
| ಇ) | ಕಳೆದ 4 ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ದಾಖಲಾದ ಬಾಲ್ಯವಿವಾಹ ಪ್ರಕರಣಗಳು ಎಷ್ಟು; (ಕಲ್ಯಾಣ ಕರ್ನಾಟಕದ ಜಿಲ್ಲಾವಾರು ದಾಖಲಾದ ಪ್ರಕರಣಗಳ ವಿವರಗಳನ್ನು ನೀಡುವುದು) | ಕಳೆದ ನಾಲ್ಕು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ದಾಖಲಾದ ಬಾಲ್ಯವಿವಾಹ ಪ್ರಕರಣಗಳ ಮಾಹಿತಿಯನ್ನು **ಅನುಬಂಧ-02**ರಲ್ಲಿ ಒದಗಿಸಿದೆ. |

**ಸಂಖ್ಯೆ:ಮಮಇ 25 ಮಮಅ 2023**

Halappa B.S

**(ಆಚಾರ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು

# ಅನುಬಂಧ-1

## ಶ್ರೀ ಶಶೀಲ್ ಜಿ. ನಮೋಶಿ, (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 563 (635) ಕ್ಕೆ ಉತ್ತರ

| ಕ್ರ. ಸಂ | ಜಿಲ್ಲೆಯ ಹೆಸರು | 2018–19 | | | | 2019–20 | | | | 2020–21 | | | | 2021-22 | | | |
|---|---|---|---|---|---|---|---|---|---|---|---|---|---|---|---|---|---|
| | | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ |
| *1* | *2* | *7* | *8* | *9* | *10* | *11* | *12* | *13* | *14* | *15* | *16* | *17* | *18* | *19* | *20* | *21* | *22* |
| 1 | ಬಾಗಲಕೋಟೆ | 43 | 36 | 7 | 0 | 65 | 60 | 5 | 0 | 113 | 95 | 18 | 10 | 177 | 138 | 39 | 39 |
| 2 | ಬೆಂಗಳೂರು (ಗ್ರಾ) | 8 | 7 | 1 | 1 | 5 | 5 | 0 | 0 | 74 | 66 | 8 | 8 | 59 | 51 | 8 | 8 |
| 3 | ಬೆಂಗಳೂರು (ನ) | 27 | 22 | 5 | 2 | 20 | 17 | 3 | 2 | 43 | 34 | 8 | 8 | 51 | 38 | 13 | 12 |
| 4 | ಬೆಳಗಾವಿ | 150 | 138 | 12 | 0 | 144 | 132 | 12 | 6 | 187 | 169 | 18 | 13 | 140 | 124 | 16 | 16 |
| 5 | ಬಳ್ಳಾರಿ | 107 | 105 | 2 | 2 | 68 | 65 | 3 | 3 | 261 | 249 | 12 | 12 | 207 | 190 | 17 | 17 |
| 6 | ಬೀದರ್ | 48 | 43 | 5 | 1 | 86 | 86 | 0 | 0 | 72 | 69 | 3 | 1 | 42 | 42 | 0 | 0 |
| 7 | ವಿಜಯಪುರ | 68 | 67 | 1 | 1 | 58 | 58 | 0 | 0 | 111 | 110 | 1 | 0 | 82 | 55 | 27 | 27 |
| 8 | ಚಾಮರಾಜನಗರ | 21 | 21 | 0 | 0 | 25 | 22 | 3 | 3 | 87 | 86 | 1 | 1 | 72 | 67 | 5 | 5 |
| 9 | ಚಿಕ್ಕಬಳ್ಳಾಪುರ | 56 | 49 | 7 | 4 | 113 | 104 | 9 | 9 | 140 | 128 | 13 | 13 | 136 | 109 | 27 | 27 |
| 10 | ಚಿಕ್ಕಮಗಳೂರು | 24 | 22 | 2 | 2 | 42 | 37 | 5 | 5 | 109 | 94 | 15 | 11 | 104 | 87 | 17 | 17 |
| 11 | ಚಿತ್ರದುರ್ಗ | 57 | 54 | 3 | 0 | 57 | 55 | 2 | 2 | 132 | 128 | 4 | 4 | 137 | 128 | 9 | 8 |
| 12 | ದಕ್ಷಿಣ ಕನ್ನಡ | 11 | 9 | 2 | 0 | 15 | 11 | 4 | 4 | 21 | 20 | 1 | 1 | 12 | 11 | 1 | 1 |
| 13 | ದಾವಣಗೆರೆ | 72 | 70 | 2 | 1 | 60 | 59 | 1 | 1 | 79 | 72 | 7 | 7 | 73 | 67 | 6 | 6 |
| 14 | ಧಾರವಾಡ | 9 | 9 | 0 | 0 | 13 | 11 | 2 | 1 | 11 | 11 | 0 | 0 | 32 | 22 | 10 | 10 |
| 15 | ಗದಗ | 22 | 22 | 0 | 0 | 32 | 31 | 1 | 1 | 60 | 57 | 3 | 3 | 48 | 46 | 2 | 2 |
| 16 | ಕಲಬುರ್ಗಿ | 125 | 118 | 7 | 0 | 120 | 110 | 10 | 10 | 134 | 130 | 4 | 1 | 171 | 165 | 6 | 3 |
| 17 | ಹಾಸನ | 40 | 38 | 2 | 0 | 30 | 30 | 0 | 0 | 160 | 121 | 39 | 29 | 106 | 67 | 39 | 31 |
| 18 | ಹಾವೇರಿ | 24 | 23 | 1 | 0 | 31 | 31 | 0 | 0 | 52 | 52 | 0 | 0 | 71 | 71 | 0 | 0 |
| 19 | ಕೊಡಗು | 10 | 8 | 2 | 0 | 20 | 19 | 1 | 1 | 10 | 8 | 2 | 1 | 10 | 7 | 3 | 3 |
| 20 | ಕೋಲಾರ | 17 | 17 | 0 | 0 | 38 | 37 | 1 | 1 | 94 | 93 | 1 | 2 | 74 | 68 | 6 | 6 |
| 21 | ಕೊಪ್ಪಳ | 98 | 92 | 6 | 6 | 275 | 270 | 5 | 3 | 119 | 111 | 8 | 4 | 67 | 67 | 0 | 0 |
| 22 | ಮಂಡ್ಯ | 47 | 29 | 18 | 11 | 58 | 30 | 28 | 26 | 76 | 42 | 34 | 28 | 142 | 66 | 76 | 70 |
| 23 | ಮೈಸೂರು | 73 | 69 | 4 | 5 | 91 | 84 | 7 | 7 | 277 | 246 | 31 | 31 | 238 | 205 | 33 | 33 |

| ಕ್ರ. ಸಂ | ಜಿಲ್ಲೆಯ ಹೆಸರು | 2018-19 | | | | 2019-20 | | | | 2020-21 | | | | 2021-22 | | | |
|---|---|---|---|---|---|---|---|---|---|---|---|---|---|---|---|---|---|
| | | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ |
| 24 | ರಾಯಚೂರು | 31 | 30 | 1 | 0 | 41 | 39 | 2 | 2 | 95 | 77 | 18 | 17 | 147 | 135 | 12 | 4 |
| 25 | ರಾಮನಗರ | 37 | 30 | 7 | 2 | 90 | 59 | 31 | 18 | 129 | 109 | 20 | 7 | 92 | 81 | 11 | 9 |
| 26 | ಶಿವಮೊಗ್ಗ | 55 | 42 | 13 | 3 | 65 | 48 | 17 | 17 | 125 | 107 | 18 | 18 | 94 | 76 | 18 | 18 |
| 27 | ತುಮಕೂರು | 50 | 45 | 5 | 5 | 55 | 51 | 4 | 4 | 130 | 123 | 7 | 7 | 111 | 100 | 11 | 11 |
| 28 | ಉಡುಪಿ | 2 | 1 | 1 | 1 | 1 | 1 | 0 | 0 | 1 | 1 | 0 | 0 | 0 | 0 | 0 | 0 |
| 29 | ಉತ್ತರ ಕನ್ನಡ | 9 | 7 | 2 | 1 | 12 | 12 | 0 | 0 | 21 | 20 | 1 | 1 | 16 | 15 | 1 | 1 |
| 30 | ಯಾದಗಿರಿ | 53 | 52 | 1 | 0 | 49 | 49 | 0 | 0 | 84 | 83 | 1 | 1 | 108 | 103 | 5 | 5 |
| 31 | ವಿಜಯನಗರ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| **Total** | | **1394** | **1275** | **119** | **48** | **1779** | **1623** | **156** | **130** | **3007** | **2711** | **296** | **239** | **2819** | **2401** | **418** | **389** |

## ಅನುಬಂಧ-2

### ಶ್ರೀ ಶಶೀಲ್ ಜಿ. ನಮೋಶಿ, (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 563 (635) ಕ್ಕೆ ಉತ್ತರ

| ಕ್ರ. ಸಂ | ಜಿಲ್ಲೆಯ ಹೆಸರು | 2018-19 | | | | 2019-20 | | | | 2020-21 | | | | 2021-22 | | | |
|---|---|---|---|---|---|---|---|---|---|---|---|---|---|---|---|---|---|
| | | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ |
| *1* | *2* | *3* | *4* | *5* | *6* | *7* | *8* | *9* | *10* | *11* | *12* | *13* | *14* | *15* | *16* | *17* | *18* |
| 1 | ಬಳ್ಳಾರಿ | 107 | 105 | 2 | 2 | 68 | 65 | 3 | 3 | 261 | 249 | 12 | 12 | 207 | 190 | 17 | 17 |
| 2 | ಬೀದರ್ | 48 | 43 | 5 | 1 | 86 | 86 | 0 | 0 | 72 | 69 | 3 | 1 | 42 | 42 | 0 | 0 |
| 3 | ಕಲಬುರ್ಗಿ | 125 | 118 | 7 | 0 | 120 | 110 | 10 | 10 | 134 | 130 | 4 | 1 | 171 | 165 | 6 | 3 |
| 4 | ಕೊಪ್ಪಳ | 98 | 92 | 6 | 6 | 275 | 270 | 5 | 3 | 119 | 111 | 8 | 4 | 67 | 67 | 0 | 0 |
| 5 | ರಾಯಚೂರು | 31 | 30 | 1 | 0 | 41 | 39 | 2 | 2 | 95 | 77 | 18 | 17 | 147 | 135 | 12 | 4 |
| 6 | ಯಾದಗಿರಿ | 53 | 52 | 1 | 0 | 49 | 49 | 0 | 0 | 84 | 83 | 1 | 1 | 108 | 103 | 5 | 5 |
| 7 | ವಿಜಯಪುರ | 68 | 67 | 1 | 1 | 58 | 58 | 0 | 0 | 111 | 110 | 1 | 0 | 82 | 55 | 27 | 27 |
| **Total** | | **530** | **507** | **23** | **10** | **697** | **677** | **20** | **18** | **876** | **829** | **47** | **36** | **824** | **757** | **67** | **56** |